ಗೂನುರನ ತಾಯಿ, ಮಗ ಬರಬಹುದು ಎಂದು ಮನೆಯಲ್ಲಿ ಎದುರು ನೋಡುತ್ತಾ ಇದ್ದಳು. ಅವಳಿಗೆ ಕಾದಿದ್ದು ನಿರಾಶೆ. ಸೊಸೆಯರನ್ನು ಕೇಳಿದಳು. ಅವರು ಇತ್ತ ಉತ್ತರ:

"ಇಲ್ಲಿಯೇ ಎಲ್ಲೋ ಅಹಾರ ತರುವುದಕ್ಕೆ ಹೋಗಿದ್ದಾನೆ. ಇನ್ನೇನು ಬರುತ್ತಾನೆ."

ತಾಯಿ ಮೂರು ದಿನ ಕಾದಳು. ಮಗ ಬರಲಿಲ್ಲ. ಅವಳಿಗೆ ಕಳವಳ. ಎಷ್ಟಾದರೂ ತಾಯಿ. ಹೊರಹೋಗುವಾಗ ಹೇಳಿ ಹೋಗುವ ಮಗ ಈ ಬಾರಿ ಏನನ್ನೂ ಹೇಳಿರಲಿಲ್ಲ. ಸೊಸೆಯರು ಸರಿಯಾದ ಉತ್ತರವನ್ನೂ ಕೊಡುತ್ತಿಲ್ಲ. ಇನ್ನು ಅವರನ್ನು ಕೇಳಿ ಪ್ರಯೋಜನ ಇಲ್ಲವೆಂದು ಬಗೆದು ತಾನೇ ಹೋಗಿ ಹುಡುಕಬೇಕೆಂದು ಆಕೆ ನಿರ್ಧರಿಸಿದಳು. ಸೊಸೆಯರಿಗೆ ಸುಳಿವು ನೀಡಲಿಲ್ಲ. ಗೂಡಿನಿಂದ ಹೊರಟು ತನ್ನ ಮಗನ ಹೆಜ್ಜೆಗುರುತನ್ನು ಹಿಂಬಾಲಿಸಿ ನಡೆದಳು. "ಇಲಿ ಬಿಲ" ಸಿಕ್ಕಿತು. ಅದರ ಸುತ್ತಾ ಪರೀಕ್ಷೆ ಮಾಡಿದಳು. ಮಗ ಅಲ್ಲಿಂದ ಹೊರ ಹೊರಟ ಎಂಬುದಕ್ಕೆ ಯಾವ ಪುರಾವೆಯೂ ಸಿಗಲಿಲ್ಲ. ಆಗ ಅವಳಿಗೆ ಏನೋ ಸಂಶಯ ಬಂದು ತನ್ನ ಬಳಿ ಇದ್ದ ಯಾಮ್ ಕೋಲನ್ನು (**Yam Stick**, ಆಸ್ಟ್ರೇಲಿಯಾದ ಆದಿನಿವಾಸಿಗಳು ಗಡ್ಡೆ ಗೆಣಸುಗಳಿಗಾಗಿ ನೆಲ ಅಗೆಯಲು ಬಳಸುವ ಸಾಧನ. ಚೂಪಾದ ತುದಿ ಇರುವ ಇವುಗಳ ಉದ್ದ ಸುಮಾರು ಒಂದು ಮೀಟರ್) ಗುಂಡಿಯಲ್ಲಿ ಅದ್ದಿದಳು. ಅಲ್ಲಿ ಏನೋ ತೂಕದ ವಸ್ತು ಇದ್ದಂತೆ ಭಾಸವಾಯಿತು. ನೀರನ್ನು ಬಗೆದು ನೋಡಿದಾಗ ಕಂಡದ್ದು ಒಂದು ದೇಹ. ಕೂಡಲೇ ಯಾಮ್ ಕೋಲನ್ನು ಬಳಸಿ ದೇಹವನ್ನು ಮೇಲಕ್ಕೆ ಎತ್ತಹೋದಳು. ಆದರೆ ಕೋಲು ಮುರಿದುಹೋಯಿತು. ಹೀಗೆ ಅನೇಕ ಕೋಲುಗಳು ವ್ಯರ್ಥವಾದವು. ಆಗ ಅವಳು ಪಕ್ಕದ ಕಾಡಿನಿಂದ ಮಡ್ಜೀ ಕೋಲನ್ನು ಸೀಳಿಕೊಂಡು ಬಂದು ಪ್ರಯತ್ನ ಪಟ್ಟಳು. ಸಫಲಳಾದಳು. ದೇಹವನ್ನು ಹತ್ತಿರ ಇಟ್ಟುಕೊಂಡು ನೋಡಿದಳು. ಹೌದು, ಅದು ಮಗನ ದೇಹವೇ. ತತ್ತರಿಸಿದಳು. ಇನ್ನು ಅವನು ಬದುಕಿದ್ದಾನೆಯೋ ಅಥವಾ ಸತ್ತಿದ್ದಾನೆಯೋ ಪರೀಕ್ಷಿಸಬೇಕಿತ್ತು. ಅದಕ್ಕೆಂದು ದೇಹವನ್ನು ಹತ್ತಿರವಿದ್ದ ಇರುವೆಗೂಡಿಗೆ ಕೊಂಡೊಯ್ದಳು. ಇರುವೆಗಳ ಮಧ್ಯೆ ದೇಹವನ್ನು ಇರಿಸಿದಳು. ಅವು ದೇಹದ ಮೇಲೆಲ್ಲಾ ಸರಿದಾಡಿದಾಗ ಗೂನುರ್ ವಿಲಿ ವಿಲಿ ಒದ್ದಾಡುತ್ತಾ ಎದ್ದ. ಅವನಿಗೆ ಜ್ಞಾನ ಬಂದ ತಕ್ಷಣ ಅವನ ಹೆಂಡಿರು ಮಾಡಿದ ಪಿತೂರಿಯ ಬಗ್ಗೆ ತಿಳಿಸಿದ. ಕೇಳಿ ತಾಯಿ ಕುಪಿತಳಾದಳು.

"ಇನ್ನು ಅವರು ನಿನ್ನ ಹೆಂಡಿರಲ್ಲ. ನಿನ್ನಂತಹ ಗಂಡನನ್ನ ಹೊಂದಲು ಅವರಿಗೆ ಯೋಗ್ಯತೆ ಇಲ್ಲ. ನಡಿ ನನ್ನ ಜೊತೆ. ಇಂದಿನಿಂದ ನೀನು ನನ್ನ ಡಾರ್‌ಡರ್ರಿನಲ್ಲಿ (**Dardurr**, ಮರದ ಪೊಟರೆ) ಅಡಗಿಕೊಂಡಿರು. ಅವರಿಗೆ ಕಾಣಿಸಿಕೊಳ್ಳಬೇಡ. ನೀನು ಬೇಟೆಯಾಡಲು ಹೋಗುವಾಗ ನನ್ನ ಕೋಂಬಿಯಲ್ಲಿ (**Comebee**, ಕಾಂಗರೂ ಚರ್ಮದಿಂದ ಹೊಲೆದಿರುವ ಚೀಲ) ನಾನು ನಿನ್ನನ್ನು ಕರೆದೊಯ್ಯುತ್ತೇನೆ. ಅವರು ದೂರ ಹೋದ ಮೇಲೆ ನೀನು ಹೊರಗೆ ಬಾ" ಎಂದು ತಾಯಿ ಮಗನಿಗೆ ಹುಕುಂ ಇತ್ತಳು.

ಅನೇಕ ದಿನಗಳವರೆಗೆ ಈ ವ್ಯವಸ್ಥೆ ಮುಂದುವರೆಯಿತು. ಸೊಸೆಯರಿಗೆ ತಮ್ಮ ಗಂಡ ತಾಯಿಯ ಜೊತೆ ಬೇರೆ ಇರುವುದರ ಅರಿವೇ ಇರಲಿಲ್ಲ. ಆದರೆ ಅವರಿಗೆ ಒಂದು ಆಶ್ಚರ್ಯ ಕಾದಿತ್ತು. ದಿನೇ ದಿನೇ ಅವರ ಗೂಡಿಗೆ ತಾಯಿ ಹೆಚ್ಚು ಹೆಚ್ಚು ಅಹಾರ ಪದಾರ್ಥಗಳನ್ನು ತರುತ್ತಿದ್ದಳು. ಸೊಸೆಯರಿಗೆ ಅನ್ನಿಸಿತು,

'ಈ ಮುದುಕಿ ಹೇಗೆ ಇಷ್ಟೊಂದು ಸಾಮಾನು ತಂದಿದ್ದಾಳೆ? ಹೇಗೆ ಇಷ್ಟು ಬೇಟೆ ಆಡಿದಳು? ಯಾರೋ ಸಹಾಯ ಮಾಡಿರಬೇಕು. ಇವಳೊಬ್ಬಳಿಂದಲೇ ಆಗದ ಕೆಲಸ ಇದು. ಇಲ್ಲಿ ಏನೋ ನಿಗೂಢ ಇದೆ.' ಎಂದು ಕಂಡು ಹಿಡಿಯುವ ಮನಸ್ಸು ಮಾಡಿದರು ಇಬ್ಬರೂ. ಅವರು ಮಾತನಾಡಿಕೊಂಡರು:

"ನೋಡು ಅವಳು ಒಬ್ಬಳೇ ಹೋಗುತ್ತಾಳೆ. ಆದರೆ ಬರುವಾಗ ನಾವಿಬ್ಬರೂ, ವಯಸ್ಸಿನಲ್ಲಿ ಚಿಕ್ಕವರು, ಸೇರಿ ತರುವುದಕ್ಕಿಂತ ಹೆಚ್ಚು ಸಾಮಾನುಗಳನ್ನು ತರುತ್ತಾಳೆ. ಇಂದು ಅಪೋಸಮ್